ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 29th March 1973/ Chaitra 8, 1895 S. E.

The House met in the Assembly Chamber, Vidhana Soudha, at One of the Clock.

Mr. DEPUTY SPEAKER (Sri. B. P. KADAM) in the Chair.

STARRED QUESTIONS

(to which oral Answers were given)

Bridge Across Krishna River at Gogul Village

45. Sri A. SHARANAPPA (Deodurg).—

Will the Minister of State for Major Irrigation be pleased to state :—

(*a*) whether it is a fact that most of Deodurg and Raichur and taluks of Raichur District, Shorapur, Shahpur and Jewargi taluks of Gulbarga District are coming under Upper Krishna Project ;

(*b*) if so, the area of each taluk ;

(*c*) whether there is any proposal before the Government for the construction of bridge over Krishna river at Gogul village in Deodurg Taluk, to facilitate communication and transportation of goods etc. ;

(*d*) if so, whether the same has been included in future programme ;

(*e*) when the Government intend to take preliminary steps in the matter ?

Sri H.N. NANJE GOWDA (Minister of state for Major Irrigation).—

(*a*) Yes.

(SRI H. N. NANJE GOWDA)

(*b*) *Upper Krishna Project.*—

(*i*) *Stage II*

Deodurg Taluk	...	2,27,205 acres
Raichur Taluk	...	1,14,580 acres

(*ii*) *Stage I*

Shorapur Taluk	...	2,36,000 acres
Shahpur Taluk	...	2,30,000 acres
Jewargi Taluk	...	2,58,000 acres

(*c*) No.

(*d*) Does not arise in view of reply to (*c*) above.

(*e*) When the finacial position of State permits.

ಶ್ರೀ ಎ. ಶರಣಪ್ಪ.— ತಾವು (ಅ) ಗೆ ಉತ್ತರವಾಗಿ ನಿಜ ಎಂದು ಹೇಳಿದ್ದೀರಿ. ಇದರ ಅಂಕಿ ಸಂಖ್ಯೆಗಳನ್ನು ನೋಡಿದರೆ ಸುಮಾರು 10 ಲಕ್ಷ ಎಕರೆಗೆ ಮೇಲ್ಪಟ್ಟು 12 ಲಕ್ಷ ಎಕರೆಗಳಿಗೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಿಂದ ನೀರಾವರಿಯಾಗುತ್ತದೆ. ಈ ನೀರಾವರಿಕೆಯನ್ನ ಮುಗಿಯುವುದರೊಳಗೆ ಗುಲ್ಬರ್ಗ ಡಿಸ್ಟ್ರಿಕ್ಟ್ ಮತ್ತು ರಾಯಚೂರು ಡಿಸ್ಟ್ರಿಕ್ಟ್‌ನ ಸಂಕಷ್ಟ ಬೆಳೆದು ಆಹಾರ ಧಾನ್ಯ ಸಾಗಿಸುವುದಕ್ಕೆ ಒಕ್ಕಲಿಗರಿಗೆ ಸೌಕರ್ಯ ಮಾಡಿಕೊಡಬೇಕು ಮತ್ತು ಇದೇ ಪ್ರಶ್ನೆಯ (ಇ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಇದು ಸೇತುವೆ ಆಗುವುದಕ್ಕೆ ಉತ್ತಮವಾದಂಥ ಸ್ಥಳ ಅಲ್ಲಿ ಹಾರ್ಡ್‌ರಾಕ್ ಇದೆ. ಅದನ್ನು ಫೌಂಡೇಷನ್‌ಗೆ ಉಪಯೋಗಿಸಿ ಕೊಳ್ಳಬಹುದು. ಆದುದರಿಂದ ಈ ಕೆಲಸವನ್ನು ತೆಗೆದುಕೊಂಡರೆ ಎಲ್ಲಾ ಭಾಗದ ಜನಗಳಿಗೂ ಅನುಕೂಲವಾಗುತ್ತದೆ; ಆ ರೀತಿ ಮಾಡುವುದು ಒಳ್ಳೆಯದಲ್ಲವೇ ?

† ಶ್ರೀ ಹೆಚ್. ಎನ್. ನಂಜೇಗೌಡ.—ಗೋಗುಳ ಗ್ರಾಮದ 20 ಮೈಲಿ ಕೆಳಗಡೆ ಒಂದು ಸೇತುವೆ ಇದೆ. ದೇವದುರ್ಗದ ಗ್ರಾಮದ ಮೇಲುಗಡೆ 15 ಮೈಲಿ ದೂರದಲ್ಲಿ ಇನ್ನೊಂದು ಸೇತುವೆ ಕಟ್ಟುತ್ತಿದ್ದಾರೆ. ಮುಂದೆ ತಾವು ಹೇಳಿದುದನ್ನು ಪರಿಶೀಲನೆ ಮಾಡಬೇಕಾಗುತ್ತದೆ.

ಶ್ರೀ ಎ. ಶರಣಪ್ಪ.—20 ಮೈಲಿ ದೂರದಲ್ಲಿ ಇರತಕ್ಕಂಥ ಸೇತುವೆ ಆಂಧ್ರ ಪ್ರದೇಶದ್ದು. ಅದು ನಮ್ಮ ಸ್ಪೇಟ್‌ನಲ್ಲಿ ಇದೆ. ಇನ್ನೊಂದು ಸೇತುವೆ ಕಟ್ಟುತ್ತಾ ಇರತಕ್ಕಂಥದ್ದು 15 ಮೈಲಿ ದೂರದಲ್ಲಿದೆ ಎಂದು ಹೇಳಿದರು. ಅದು ಸುಮಾರು 30 ಮೈಲಿ ದೂರದಲ್ಲಿದೆ. ಆದುದರಿಂದ ಇದಕ್ಕೆ ಪ್ರಾಧಾನ್ಯತೆ ಕೊಟ್ಟು ಇಲ್ಲಿ ಸೇತುವೆ ಆಗುವುದಕ್ಕೆ ಇನ್‌ವೆಸ್ಟಿಗೇಷನ್ ಮಾಡಿಸಿ ಎಸ್ಟಿಮೇಟ್ ಮತ್ತು ಪ್ಲಾನ್ ಹಾಕುವುದು ಒಳ್ಳೆಯದಲ್ಲವೇ !

ಶ್ರೀ ಹೆಚ್. ಎನ್. ನಂಜೇಗೌಡ.—ಈಗ ತಾವು ಆ ಕೆಲಸವನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೀರಿ. ಸರ್ಕಾರ ಅದನ್ನು ಆಲೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳುತ್ತದೆ.

Seva Sahakari Society at Angol

111. **Sri B. B. SAYANAK** (Belgaum).—

ill the Minist r for Co-operation be pleased to state :—

(*a*) whether it has come to the notice of Government that there is a Seva Sahakari Society at Angol, in Belgaum taluk in Belgaum District ;

†Indicates that remarks or speeches have not been revised by the member concerned.